KABK210016182019

Presented on : 19-10-2019
Registered on : 19-10-2019
Decided on : 22-06-2026
Duration : 6 years, 8 months, 3 days

**ಪ್ರಧಾನ ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮುಧೋಳ.**

**ಉಪಸ್ಥಿತರು: ಶ್ರೀ ಲಗಮಾ ಎಸ್. ಹುಕ್ಕೇರಿ, ಬಿ.ಎ.ಎಲ್.ಎಲ್.ಬಿ (ಸ್ಪೆಷಲ್)**

**ದಿ: 22 ನೇ ಜೂನ ಮಾಹೇ 2026**

**ಸಿ.ಸಿ.ನಂ 1137/2019**

ಫಿರ್ಯಾದಿದಾರರು: ಕರ್ನಾಟಕ ಸರ್ಕಾರದ ಪರವಾಗಿ,
ಸಹಾಯಕ ಆರಕ್ಷಕ ಉಪನಿರೀಕ್ಷಕರು, ಮುಧೋಳ.

**::ವಿರುದ್ಧ::**

ಆರೋಪಿ ನಂ.1: ದ್ಯಾಮವ್ವ ಗಂ ಕಲ್ಲಪ್ಪ ಮೆಟಗುಡ್ಡ.
ಉದ್ಯೋಗ: ಮನೆಗೆಲಸ, ಸಾ: ಕುಳಲಿ,
ತಾ: ಮುಧೋಳ, ಜಿ: ಬಾಗಲಕೋಟ.

ಆರೋಪಿ ನಂ.2: ಭೀಮಪ್ಪ ತಂ ಕಲ್ಲಪ್ಪ ಮೆಟಗುಡ್ಡ.

**(ಆರೋಪಿ ನಂ.2 ಇವರು ತೀರಿಕೊಂಡಿದ್ದರಿಂದ ಅವರ ವಿರುದ್ಧ ಪ್ರಕರಣ ಅಬೇಟ ಆಗಿರುತ್ತದೆ)**

ಆರೋಪಿ ನಂ.3: ಹನಮಂತ ತಂ ಕಲ್ಲಪ್ಪ ಮೆಟಗುಡ್ಡ.
ವಯಾ: 40 ವರ್ಷ, ಉದ್ಯೋಗ: ಕೂಲಿ,
ಸಾ: ಕುಳಲಿ, ತಾ: ಮುಧೋಳ, ಜಿ: ಬಾಗಲಕೋಟ.

ಆರೋಪಿ ನಂ.4: ಶೆಟ್ಟೆಪ್ಪ ತಂ ಕಲ್ಲಪ್ಪ ಮೆಟಗುಡ್ಡ.
ವಯಾ: 50 ವರ್ಷ, ಉದ್ಯೋಗ: ಒಕ್ಕಲುತನ,
ಸಾ: ಕುಳಲಿ, ತಾ: ಮುಧೋಳ, ಜಿ: ಬಾಗಲಕೋಟ.

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.06.29 12:41:28 +0530

ಆರೋಪಿ ನಂ.5: ಶೆಟ್ಟೆಪ್ಪ ಕಲ್ಲವ್ವ ಕಳ್ಳಿಮನಿ.
ವಯಾ: 45 ವರ್ಷ, ಉದ್ಯೋಗ: ಕೂಲಿ,
ಸಾ: ಕುಳಲಿ, ತಾ: ಮುಧೋಳ, ಜಿ: ಬಾಗಲಕೋಟ.

======

| | |
|---|---|
| ಘಟನೆ ನಡೆದ ದಿನಾಂಕ | 12-09-2018 |
| ಆರೋಪಿತರು ನ್ಯಾಯಾಲಯಕ್ಕೆ ಹಾಜರಾದ ದಿನಾಂಕ | 22-11-2018 |
| ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ ದಿನಾಂಕ | 22-11-2018 |
| ಸಾಕ್ಷಿದಾರರ ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | 11-06-2025 |
| ಸಾಕ್ಷ್ಯ ಮುಗಿದ ದಿನಾಂಕ | 22-04-2026 |
| ಪ್ರಕರಣದ ಆರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 448, 323, 354(ಬಿ), 109, 504 ಸಹವಾಚಕ 149. |
| ನ್ಯಾಯಾಧೀಶರ ಅಭಿಪ್ರಾಯ | ಬಿಡುಗಡೆಗೊಳಿಸಲಾಗಿದೆ. |
| ಸರ್ಕಾರದ ಪರ ಅಭಿಯೋಜಕರು | ಸಹಾಯಕ ಸರ್ಕಾರಿ ಅಭಿಯೋಜಕರು |
| ಆರೋಪಿತರ ಪರ ವಕೀಲರು | ಶ್ರೀ. ಜೆ.ಬಿ.ಎನ್., ವಕೀಲರು |

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.06.29 12:41:37 +0530

**(ಶ್ರೀ.ಲಗಮಾ ಹುಕ್ಕೇರಿ)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಮುಧೋಳ.**

:: **ತೀರ್ಪು** ::

ಚಾಸಾ-14 ಸಹಾಯಕ ಆರಕ್ಷಕ ಉಪನಿರೀಕ್ಷಕರು, ಮುಧೋಳ, ಇವರು ಆರೋಪಿತರ ವಿರುದ್ಧ ತನಿಖೆಯನ್ನು ಪೂರೈಸಿ ಭಾರತೀಯ ದಂಡ ಸಂಹಿತೆ ಕಲಂ 448,

323, 354(ಬಿ), 109, 504 ಸಹವಾಚಕ 149 ರಡಿಯಲ್ಲಿ ಅಭಿಯೋಜನೆಯ ಮೂಲಕ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಾರಾಂಶವೇನಂದರೆಃ**

ಫಿರ್ಯಾದಿದಾರಳು ಮತ್ತು ಆರೋಪಿ ನಂ.5 ರವರು ಗಂಡ ಹೆಂಡತಿಯರು ಇರುತ್ತಾರೆ. ಆರೋಪಿ ನಂ.5 ಇವನು ಆರೋಪಿ ನಂ.1 ರವರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದು, ಈ ಕುರಿತು ಆರೋಪಿ ನಂ.1 ರಿಂದ 4 ರವರ ಮಾತು ಕೇಳಿ ಆರೋಪಿ ನಂ.5 ರವರು ಚಾಸಾ-1 ರವರ ಜೊತೆ ಜಗಳ ಮಾಡುತ್ತಾ ಬಂದು ಮನೆಯಿಂದ ಹೊರಗೆ ಹಾಕಿರುತ್ತಾನೆ. ನಂತರ ಚಾಸಾ-4 ಮತ್ತು 5 ರವರು ಸದರಿ ವಿಷಯದ ಕುರಿತು ನ್ಯಾಯ ಮಾಡಿ ಚಾಸಾ-1 ರವರನ್ನು ಗಂಡನ ಮನೆಯಲ್ಲಿ ಬಿಟ್ಟು ಹೋಗಿರುತ್ತಾರೆ. ದಿನಾಂಕ:20-09-2018 ರಂದು ರಾತ್ರಿ 10.30 ಗಂಟೆಗೆ ಚಾಸಾ-1 ರವರು ಮನೆಯಲ್ಲಿ ಮಲಗಿದ್ದಾಗ ಆರೋಪಿ ನಂ.1 ರವರು ಫೋನ ಮಾಡಿ ನಿನ್ನ ಗಂಡನ ಕೈಯಲ್ಲಿ ಫೋನ ಕೊಡು ಅಂತಾ ಅಂದಾಗ ಚಾಸಾ-1 ರವರು ಅವರು ಮಲಗಿಕೊಂಡಿದ್ದಾರೆ ಬೆಳಿಗ್ಗೆ ಮಾತನಾಡು ಅಂತಾ ಹೇಳಿದಾಗ ಸದರಿ ಆರೋಪಿ ನಂ.1 ರವರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ತಾನು ಮತ್ತು ಆರೋಪಿ ನಂ.2 ರಿಂದ 4 ರವರು ಕೂಡಿಕೊಂಡು ಚಾಸಾ-1 ರವರ ಮನೆಗೆ ಬಂದು ಅಕ್ರಮ ಪ್ರವೇಶ ಮಾಡಿ ಆರೋಪಿ ನಂ.5 ರವರ ಚಿತಾವಣೆಯಿಂದ ಅವಳಿಗೆ ಕೈಯಿಂದ ಹೊಡಿಬಡಿ ಮಾಡಿ, ಮನೆಯಲ್ಲಿಂದ ಹೊರಗೆ ಎಳೆದು ತಂದು ಆರೋಪಿ ನಂ.2 ರಿಂದ 4 ರವರು ಅವಳ ಮೈಮೇಲಿದ್ದ ಸೀರೆ ಮತ್ತು ಜಂಪರ ಹಿಡಿದು ಜಗ್ಗಾಡಿ ಮಾನಭಂಗ ಮಾಡಿ, ಆ ಮೂಲಕ ಆರೋಪಿತರು ಭಾರತೀಯ ದಂಡ

ಸಂಹಿತೆ ಕಲಂ. 448, 323, 354(ಬಿ), 109, 504 ಸಹವಾಚಕ 149 ರಡಿಯಲ್ಲಿ ಅಪರಾಧ ಮಾಡಿರುತ್ತಾರೆ ಎಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ ನಂತರ ಪೋಲಿಸರು ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಆರೋಪಿತರ ವಿರುದ್ಧ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿತರು ತನಿಖಾವಧಿಯಲ್ಲಿ ಜಾಮೀನನ್ನು ಪಡೆದುಕೊಂಡಿದ್ದರಿಂದ ಅವರಿಗೆ ಸಮನ್ಸ ಹೊರಡಿಸಲಾಯಿತು. ತದನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ನೀಡಲಾದ ಪದತ್ತವಾದ ಅಧಿಕಾರವನ್ನು ಚಲಾಯಿಸಿ, ಪೋಲಿಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ದಾಖಲೆಗಳನ್ನು ಉಚಿತವಾಗಿ ನೀಡಿ, ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ಓದಿ ಹೇಳಲಾಗಿ, ಆರೋಪಿತರು ವಿಚಾರಣೆಯಾಗಬೇಕು ಎಂದು ತಿಳಿಸಿರುತ್ತಾರೆ.

ಸದರಿ ಪ್ರಕರಣ ವಿಚಾರಣೆಯಲ್ಲಿರುವಾಗ ಆರೋಪಿ ನಂ.2 ರವರು ತೀರಿಕೊಂಡ ಬಗ್ಗೆ ವರದಿಯಾಗಿದ್ದರಿಂದ ಅವರ ವಿರುದ್ದ ಸದರಿ ಪ್ರಕರಣ ಅಬೇಟ ಆಗಿರುತ್ತದೆ.

**4.** ಅಭಿಯೋಜನೆಯು ಆರೋಪಿತರ ವಿರುದ್ಧದ ಅಪರಾಧಗಳನ್ನು ಸಾಬೀತುಪಡಿಸಲು ಪ್ರಾಸಾ-1 ರಿಂದ 6 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವ ಮೂಲಕ ನಿಪಿ-1 ರಿಂದ 6 ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ. ಸದರಿ ಪ್ರಕರಣದಲ್ಲಿ ಪ್ರಾಸಾ-1 ರಿಂದ 6 ರವರನ್ನು ವಿಚಾರಣೆ ಮಾಡಿದ ನಂತರ ಸಸಅರವರು ಉಳಿದ ಸಾಕ್ಷಿದಾರರ ಸಾಕ್ಷ್ಯವನ್ನು ಮಾಡಿಸಲು ಸಮನ್ಸ ಹೊರಡಿಸಲು ಮಾಡಿದ ಮನವಿಯನ್ನು ನ್ಯಾಯಾಲಯವು ತಳ್ಳಿಹಾಕಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈಬಿಟ್ಟಿರುತ್ತದೆ. ಪ್ರಾಸಾ-1 ರಿಂದ 6

ರವರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನುಡಿದಿದ್ದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ಮನ್ನಾ ಮಾಡಲಾಯಿತು ಮತ್ತು ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಮಾಡುವುದರ ಮೂಲಕ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**5.** ಉಭಯ ಪಕ್ಷಗಾರರ ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿದೆ.

**6.** ಈ ಮೇಲಿನ ಅಂಶಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

**ಅಂಶ ನಂಃ 1:** ದಿನಾಂಕ:20.09.2018 ರಂದು ರಾತ್ರಿ 10.30 ಗಂಟೆಯ ಸುಮಾರಿಗೆ ಮುಧೋಳ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕುಳಲಿ ಗ್ರಾಮದಲ್ಲಿ ಚಾಸಾ-1 ರವರ ಗಂಡ ಆರೋಪಿ ನಂ.5 ರವರು ಆರೋಪಿ ನಂ.1 ರವರ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದು, ಈ ಕುರಿತು ಆರೋಪಿ ನಂ.1, 3 ರಿಂದ 5 ಇವರು ತೀರಿಕೊಂಡ ಆರೋಪಿ ನಂ.2 ರವರ ಜೊತೆ ಕೂಡಿಕೊಂಡು ಚಾಸಾ-1 ರವರ ಜೊತೆ ಜಗಳ ಮಾಡುತ್ತಾ ಬಂದಿದ್ದು, ಆರೋಪಿ ನಂ.1 ರವರು ಚಾಸಾ-1 ರವರಿಗೆ ಫೋನ ಮಾಡಿ ನಿನ್ನ ಗಂಡನ ಕೈಯಲ್ಲಿ ಫೋನ ಕೊಡು ಅಂತಾ ಅಂದಾಗ ಚಾಸಾ-1 ರವರು ಅವರು ಮಲಗಿದ್ದಾರೆ ಬೆಳಿಗ್ಗೆ ಮಾತನಾಡು ಅಂತಾ ಹೇಳಿದಾಗ ಹಾದರಗಿತ್ತಿ, ಬೋಸಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಶಾಂತಭಂಗವನ್ನುಂಟು ಮಾಡಿ, ಆ ಮೂಲಕ

ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**<u>ಅಂಶ ನಂಃ 2:</u>** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ನಂ.1, 3 ರಿಂದ 5 ಇವರು ತೀರಿಕೊಂಡ ಆರೋಪಿ ನಂ.2 ರವರ ಜೊತೆ ಕೂಡಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರ ಮನೆಯಲ್ಲಿ ಅತೀಕ್ರಮಣ ಪ್ರವೇಶ ಮಾಡಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**<u>ಅಂಶ ನಂಃ 3:</u>** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ನಂ.1, 3 ರಿಂದ 5 ಇವರು ತೀರಿಕೊಂಡ ಆರೋಪಿ ನಂ.2 ರವರ ಜೊತೆ ಕೂಡಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರಿಗೆ ಕೈಯಿಂದ ಹೊಡಿಬಡಿ ಮಾಡಿ ಸಾಧಾ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**<u>ಅಂಶ ನಂಃ 4:</u>** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ನಂ.1, 3 ರಿಂದ 5 ಇವರು ತೀರಿಕೊಂಡ ಆರೋಪಿ ನಂ.2 ರವರ ಜೊತೆ ಕೂಡಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರ ತಲೆ ಕೂದಲು ಹಿಡಿದು ಜಗ್ಗಾಡಿ, ತೆಕ್ಕಿಬಡಿದು, ಮೈಮೇಲಿನ ಸೀರೆ ಹಾಗೂ ಜಂಪರ ಹಿಡಿದು ಎಳೆದಾಡಿ ಮಾನಭಂಗ ಪಡಿಸಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**<u>ಅಂಶ ನಂಃ 5:</u>** ಈ ಮೇಲೆ ನಮೂದಿಸಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ನಂ.1, 3 ರಿಂದ 5 ಇವರು ತೀರಿಕೊಂಡ ಆರೋಪಿ ನಂ.2 ರವರ ಜೊತೆ ಕೂಡಿಕೊಂಡು ಅಪರಾಧ ಮಾಡುವ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಬಂದು ಆರೋಪಿ ನಂ.5 ರವರ ಪ್ರಚೋದನೆ ಮೇರೆಗೆ ಆರೋಪಿ ನಂ.1 ರಿಂದ 4 ರವರು ಚಾಸಾ-1 ರವರ ತಲೆ ಕೂದಲು ಹಿಡಿದು ಜಗ್ಗಾಡಿ, ತೆಕ್ಕಿಬಡಿದು, ಸೀರೆ ಹಾಗೂ ಜಂಪರ ಹಿಡಿದು ಎಳೆದು ಹೊಡೆಬಡಿ ಮಾಡಿ, ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 109 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಾಯತೀತವಾಗಿ ರುಜುವಾತು ಪಡಿಸಿದ್ದಾರೆಯೇ ?

**ಅಂಶ ನಂ. 6:** ಆದೇಶ ಏನು ?

**7.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರ -

**ಅಂಶ ನಂ.1 ರಿಂದ 5 – ನಕಾರಾತ್ಮಕವಾಗಿ,**

**ಅಂಶ ನಂ. 6 ಕ್ಕೆ– ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ....**

**:: ಕಾರಣಗಳು ::**

**8. ಅಂಶ 1 ರಿಂದ 5:** ಅಭಿಯೋಜನೆಯು ಆರೋಪಿ ನಂ.1 ಮತ್ತು 3 ರಿಂದ 5 ರವರ ವಿರುದ್ಧ ಪ್ರಕರಣ ಸಾಭೀತುಪಡಿಸಲು 6 ಸಾಕ್ಷಿದಾರರನ್ನು ವಿಚಾರಣೆ ಮಾಡಿ 6 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ. ಪ್ರಾಸಾ-1 ಇವರು ಫಿರ್ಯಾದಿದಾರರಿದ್ದು, ಪ್ರಾಸಾ-3 ಮತ್ತು 4 ಗುನ್ನಾ ಸ್ಥಳ ಪಂಚನಾಮೆಯ ಪಂಚ ಸಾಕ್ಷಿದಾರರಿದ್ದು ಮತ್ತು ಪ್ರಾಸಾ-2, 5 ಮತ್ತು 6 ರವರು ಅಪ್ರತ್ಯಕ್ಷ/ಸಾಂದರ್ಭಿಕ ಸಾಕ್ಷಿದಾರರು ಇರುತ್ತಾರೆ. ಸದರಿ ಸಾಕ್ಷಿದಾರರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿದ್ದು ಅವರು ಪಾಟೀ ಸವಾಲಿನಲ್ಲಿಯೂ ಸಹ ಯಾವುದೇ ಪೂರಕ ಸಾಕ್ಷ್ಯ ನುಡಿದಿರುವುದಿಲ್ಲ.

**9.** ಪ್ರಾಸಾ-1 ಮಹಾದೇವಿ ಶೆಟ್ಟೆಪ್ಪ ಕಳ್ಳಿಮನಿ ಇವರು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ತನಗೆ ಆರೋಪಿತರ ಪರಿಚಯ ಇರುತ್ತದೆ, ಆರೋಪಿ ನಂ.5 ತನ್ನ ಗಂಡನಿರುತ್ತಾನೆ, ಆರೋಪಿತರು ಅಕ್ರಮಕೂಟ ಕಟ್ಟಿಕೊಂಡು ಬಂದು ತಮ್ಮ ಮನೆಯಲ್ಲಿ ಅತೀಕ್ರಮಣ ಪ್ರವೇಶ ಮಾಡಿ, ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಹೊಡಿಬಡಿ ಮಾಡಿರುವುದಿಲ್ಲ ಮತ್ತು ತನ್ನ ಸೀರೆ ಹಾಗೂ ಜಂಪರನ್ನು ಹಿಡಿದು ಎಳೆದಾಡಿ ತನ್ನ

ಮಾನಭಂಗ ಮಾಡಲು ಪ್ರಯತ್ನ ಮಾಡಿರುವುದಿಲ್ಲ, ಈಗ ಸುಮಾರು 7 ವರ್ಷಗಳ ಹಿಂದೆ ಆರೋಪಿ ನಂ.5 ಮತ್ತು ತನ್ನ ನಡುವೆ ಬಾಯಿ ಮಾತಿನ ಜಗಳವಾಗಿತ್ತು, ಸದರಿ ವಿಷಯದ ಕುರಿತು ತಾನು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ತನ್ನ ಹೆಬ್ಬಟ್ಟಿನ ಗುರುತನ್ನು ನಿಪಿ-1 ಫಿರ್ಯಾದಿಯ ಮೇಲೆ ತೆಗೆದುಕೊಂಡಿರುತ್ತಾರೆ ಮತ್ತು ನಿಪಿ-1 ಫಿರ್ಯಾದಿಯಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದುದರಿಂದ ಪ್ರಾಸಾ-1 ರವರು ನಿಪಿ-1 ಫಿರ್ಯಾದಿ ಪ್ರಕಾರ ಸಾಕ್ಷ್ಯವನ್ನು ನುಡಿಯದೆ ಇದ್ದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಅಭಿಯೋಜನೆಯು ಸದರಿ ಸಾಕ್ಷಿದಾರರಿಗೆ ಆರೋಪಿತರ ಜೊತೆ ಪ್ರಕರಣವನ್ನು ರಾಜೀ ಮಾಡಿಕೊಂಡಿದ್ದರ ಕಾರಣ ಆರೋಪಿತರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂಬ ಸೂಚನೆಗೆ ಸಾಕ್ಷಿದಾರರು ನಿರಾಕರಿಸಿದ್ದಾರೆ.

**10.** ಪ್ರಾಸಾ-3 ಪರಮಾನಂದ ಯಮನಪ್ಪ ಕಲ್ಮಡಿ ಮತ್ತು ಪ್ರಾಸಾ-4 ಗುರು @ ಗುರಪ್ಪ ದುಂಡಪ್ಪ ಹಂದಿನ್ನವರ ಇವರು ಗುನ್ನೆ ಸ್ಥಳ ಪಂಚನಾಮೆಯ ಪಂಚ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತನಗೆ ಚಾಸಾ-1 ಮತ್ತು ಆರೋಪಿತರ ಪರಿಚಯ ಇರುತ್ತದೆ, ತಮ್ಮ ಸಮಕ್ಷಮ ಪೋಲಿಸರು ಯಾವುದೇ ಘಟನಾ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ ಮತ್ತು ಈಗ ಸುಮಾರು 7 ವರ್ಷಗಳ ಹಿಂದೆ ತಾವು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ನಿಪಿ-3 ಗುನ್ನೆ ಸ್ಥಳ ಪಂಚನಾಮೆ ಮೇಲೆ ತಮ್ಮ ಸಹಿಗಳನ್ನು ತೆಗೆದುಕೊಂಡಿರುತ್ತಾರೆ ಮತ್ತು ನಿಪಿ-3 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ತಮಗೆ ಮಾಹಿತಿ ಇರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯವನ್ನು

ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ನಿಶಾನೆ ಪಿ-3 ಗುನ್ನೆ ಸ್ಥಳ ಪಂಚನಾಮೆಯ ಪ್ರಕಾರ ಸಾಕ್ಷ್ಯವನ್ನು ನುಡಿಯದೇ ಇದ್ದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅಭಿಯೋಜನೆಯು ಸದರಿ ಸಾಕ್ಷಿದಾರರು ಆರೋಪಿತರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂಬ ಸೂಚನೆಗೆ ಸದರಿ ಸಾಕ್ಷಿದಾರರು ನಿರಾಕರಿಸಿದ್ದಾರೆ.

**11.** ಪ್ರಾಸಾ-2 ಬಾಲಪ್ಪ ಬಸಪ್ಪ ಲಂಕೆಪ್ಪಗೋಳ, ಪ್ರಾಸಾ-5 ಶಂಕವ್ವ ಕೃಷ್ಣಾ ಗಸ್ತಿ ಮತ್ತು ಪ್ರಾಸಾ-6 ಭೀಮಶಿ ನಾಗಪ್ಪ ಕೊಳೂರು ಅಪ್ರತ್ಯಕ್ಷ/ಸಾಂದರ್ಭಿಕ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಮಗೆ ಚಾಸಾ-1 ಮತ್ತು ಆರೋಪಿತರ ಪರಿಚಯವಿರುತ್ತದೆ, ಈ ಪ್ರಕರಣದ ಬಗ್ಗೆ ತಮಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಪೋಲಿಸರ ಮುಂದೆ ತಾವು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ನಿಶಾನೆ ಪಿ-2, 5 ಮತ್ತು 6 ಹೇಳಿಕೆಗಳ ಪ್ರಕಾರ ಸಾಕ್ಷ್ಯವನ್ನು ನುಡಿಯದೇ ಇದ್ದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅಭಿಯೋಜನೆಯು ಸದರಿ ಸಾಕ್ಷಿದಾರರು ಆರೋಪಿತರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಎಂಬ ಸೂಚನೆಗೆ ಸದರಿ ಸಾಕ್ಷಿದಾರರು ನಿರಾಕರಿಸಿದ್ದಾರೆ.

**12.** ಪ್ರಾಸಾ-1 ಪಿರ್ಯಾದಿದಾರರಿದ್ದು, ಪ್ರಾಸಾ-3 ಮತ್ತು 4 ಗುನ್ನೆ ಸ್ಥಳ ಪಂಚನಾಮೆಯ ಪಂಚರಿದ್ದು ಮತ್ತು ಪ್ರಾಸಾ-2, 5 ಮತ್ತು 6 ರವರು ಅಪ್ರತ್ಯಕ್ಷ/ಸಾಂದರ್ಭಿಕ ಸಾಕ್ಷಿದಾರರು ಇರುತ್ತಾರೆ. ಸದರಿ ಸಾಕ್ಷಿದಾರರಾದ ಪ್ರಾಸಾ-1 ರಿಂದ 6 ರವರು ಈ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಈ ಹಂತದಲ್ಲಿ ಸಸಅರವರು ಉಳಿದ ಸಾಕ್ಷಿದಾರರ

ಸಾಕ್ಷ್ಯವನ್ನು ಮಾಡಿಸಲು ಸಮನ್ಸ್ ಹೊರಡಿಸಲು ಮನವಿಯನ್ನು ಮಾಡಿಕೊಂಡಿರುತ್ತಾರೆ. ಆದರೆ ಅಭಿಯೋಜನೆಯ ಮಹತ್ವದ ಸಾಕ್ಷಿದಾರರಾದ ಪ್ರಾಸಾ-1 ರಿಂದ 6 ರವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯದೆ ಇದ್ದ ಕಾರಣ ಸಸಅರವರ ಮನವಿಯನ್ನು ನ್ಯಾಯಾಲಯವು ನಿರಾಕರಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈಬಿಟ್ಟಿರುತ್ತದೆ. ಆದುದ್ದರಿಂದ ಅಭಿಯೋಜನೆಯ ಮಹತ್ವದ ಸಾಕ್ಷಿದಾರರಾದ ಪ್ರಾಸಾ-1 ರಿಂದ 6 ರವರ ಸಾಕ್ಷ್ಯದ ಮುಖಾಂತರ ಆರೋಪಿ ನಂ.1 ಮತ್ತು 3 ರಿಂದ 5 ರವರ ವಿರುದ್ಧ ಮಾಡಿರುವ ಅಪರಾಧಗಳನ್ನು ರುಜುವಾತುಪಡಿಸಲು ವಿಫಲವಾಗಿರುತ್ತದೆ. **ಆದ್ದರಿಂದ ಅಂಶ ನಂ.1 ರಿಂದ 5 ನ್ನು ನಾನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.**

**13.ಅಂಶ ನಂ.6**: ಆರೋಪಿ ನಂ.1 ಮತ್ತು 3 ರಿಂದ 5 ರವರ ವಿರುದ್ಧ ಮಾಡಲಾದ ಅಪರಾಧಗಳನ್ನು ಸಾಭೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಆರೋಪಿ ನಂ.1 ಮತ್ತು 3 ರಿಂದ 5 ರವರನ್ನು ದೋಷಮುಕ್ತರಾಗಲು ಅರ್ಹರಾಗಿದ್ದು, ಕಾರಣ ಈ ಕೆಳಕಂಡ ಆದೇಶವನ್ನು ನಾನು ಮಾಡಲು ಇಚ್ಛಿಸುತ್ತೇನೆ.

**:: ಆದೇಶ ::**

**ದಂಡ ಪ್ರಕ್ರಿಯಾ ಸಂಹಿತೆ 1973 ಕಲಂ 248(1) ರಂತೆ ಆರೋಪಿ ನಂ.1 ಮತ್ತು 3 ರಿಂದ 5 ರವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323, 354(ಬಿ), 448, 504, 109 ಸಹವಾಚಕ 149 ರಡಿಯಲ್ಲಿನ ಆರೋಪಣೆಗಳಿಗಾಗಿ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿ ನಂ.1 ಮತ್ತು 3 ರಿಂದ 5 ರವರ ಮತ್ತು ಜಾಮೀನುದಾರನ ಜಾಮೀನು ಮತ್ತು ಮುಚ್ಚಳಿಕೆ ಪತ್ರಗಳನ್ನು ರದ್ದುಗೊಳಿಸಲಾಗಿದೆ.**

(ಶೀಘ್ರಲಿಪಿಗಾರರರಿಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಗಣಕಯಂತ್ರದಿಂದ ಪಡೆದುಕೊಂಡು ಈ ದಿನ **22** ನೇ ಜೂನ–**2026** ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

LAGAMA SHIVANAPPA HUKKERI
Digitally signed by LAGAMA SHIVANAPPA HUKKERI
Date: 2026.06.29 12:41:53 +0530

**(ಶ್ರೀ.ಲಗಮಾ ಹುಕ್ಕೇರಿ)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಮುಧೋಳ.**

**ಅನುಬಂಧಗಳು**

**ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿದಾರರು:**

ಪ್ರಾಸಾ-1 : ಮಹಾದೇವಿ ಶೆಟ್ಟೆಪ್ಪ ಕಳ್ಳಿಮನಿ.
ಪ್ರಾಸಾ-2 : ಬಾಲಪ್ಪ ಬಸಪ್ಪ ಲಂಕೆಪ್ಪಗೋಳ.
ಪ್ರಾಸಾ-3 : ಪರಮಾನಂದ ಯಮನಪ್ಪ ಕಲ್ಮಡಿ.
ಪ್ರಾಸಾ-4 : ಗುರು @ ಗುರಪ್ಪ ದುಂಡಪ್ಪ ಹಂದಿನ್ನವರ.
ಪ್ರಾಸಾ-5 : ಶಂಕವ್ವ ಕೃಷ್ಣಾ ಗಸ್ತಿ.
ಪ್ರಾಸಾ-6 : ಭೀಮಸಿ ನಾಗಪ್ಪ ಕೊಳೂರ.

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು:**

ನಿಪಿ-1 : ಫಿರ್ಯಾದಿ.
ನಿಪಿ-2 : ಪ್ರಾಸಾ-2 ರವರ ಹೇಳಿಕೆ.
ನಿಪಿ-3 : ಗುನ್ನೆ ಸ್ಥಳ ಪಂಚನಾಮೆ.
ನಿಪಿ-3(ಎ) : ಪ್ರಾಸಾ-4 ರವರ ಸಹಿ.
ನಿಪಿ-4 : ಭಾವಚಿತ್ರ.
ನಿಪಿ-5 : ಪ್ರಾಸಾ-5 ರವರ ಹೇಳಿಕೆ.
ನಿಪಿ-6 : ಪ್ರಾಸಾ-6 ರವರ ಹೇಳಿಕೆ.

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳು:**

---ಇಲ್ಲಾ---

**ಆರೋಪಿತರ ಪರವಾಗಿ ವಿಚಾರಸಲಾದ ಸಾಕ್ಷಿದಾರರು:**

---ಇಲ್ಲಾ---

**ಆರೋಪಿತರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳು:**

---ಇಲ್ಲಾ---

**ಆರೋಪಿತರ ಪರವಾಗಿ ಗುರುತಿಸಲಾದ ಮುದ್ದೆಮಾಲುಗಳು:**

---ಇಲ್ಲಾ---

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.06.29 12:42:01 +0530

**(ಶ್ರೀ.ಲಗಮಾ ಹುಕ್ಕೇರಿ)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**
**ಮುಧೋಳ.**